**1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ವಿಶೇಷ ನ್ಯಾಯಾಲಯ, ಬಳ್ಳಾರಿ**

**ಸತ್ರ ಮೊಕದ್ದಮೆ ಸಂಖ್ಯೆಃ- 94/2025**

**ಪ್ರಾಸಾಃ- 1 ಸತ್ಯ ಪ್ರತಿಜ್ಞೆ ಮಾಡಿದ ದಿನಾಂಕಃ- 24.7.2026**
**ಮುಂದುವರೆದ ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದ**

ನಾನು ವಾಹನಗಳನ್ನು ಜಪ್ತು ಮಾಡಿಕೊಂಡಿದ್ದನ್ನು ನೋಡಿಲ್ಲ. ಬೇರೆ ಉಪಕರಣಗಳನ್ನು ನನ್ನ ಸಮಕ್ಷಮ ಜಪ್ತು ಮಾಡಿಲ್ಲ. ಪೋಟೋಗಳನ್ನು ಏಕೆ ತೆಗೆದರು, ಯಾವ ಜಾಗದಲ್ಲಿ ತೆಗೆದರು ಹಾಗೂ ನಕಾಶೆಗಳನ್ನು ಎಲ್ಲಿ ತಯಾರು ಮಾಡಿದರು ಎನ್ನುವುದು ನನಗೆ ಗೊತ್ತಿಲ್ಲ. ನನಗೆ ಪ್ರಕರಣದ ಬಗ್ಗೆ ಮಾಹಿತಿ ಇಲ್ಲ.

**(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಬೇಕೆಂದು ಮತ್ತು ಸಾಕ್ಷಿಯನ್ನು ಪಾಟೀ ಸವಾಲು ಮಾಡಲು ಪ್ರಾಜ್ಞ ಅಭಿಯೋಜಕರು ಕೋರಿದ್ದು, ಕೋರಿಕೆ ಸಕಾರಣಗಳಿಂದ ಕೂಡಿದ್ದರಿಂದ ಅದನ್ನು ಪುರಸ್ಕರಿಸಲಾಗಿದೆ ಮತ್ತು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಲು ಮತ್ತು ಪಾಟೀ ಸವಾಲು ಮಾಡಲು ಪ್ರಾಜ್ಞ ಅಭಿಯೋಜಕರಿಗೆ ಅನುಮತಿ ನೀಡಲಾಯಿತು).**

**ಪಾಟೀ ಸವಾಲುಃ ಸರಕಾರಿ ಅಭಿಯೋಜಕರವರಿಂದಃ**

ಸಂಡೂರು ಪೋಲೀಸರು ಗಂಧದ ಕಟ್ಟಿಗೆಗಳನ್ನು ಜಪ್ತು ಮಾಡಬೇಕು ಹಾಗೂ ಅದಕ್ಕೆ ಸಾಕ್ಷಿಯಾಗಿ ಬರಬೇಕು ಎಂದು ನೋಟೀಸ್ ಕೊಟ್ಟಿದ್ದ ಕಾರಣ ನಾನು ಮತ್ತು ಚಾಸಾ 3 ರವರು ದಿಃ 17-10-2021 ರಂದು ಬೆಳಿಗ್ಗೆ 5-30 ಗಂಟೆಗೆ ಠಾಣೆಗೆ ಹೋಗಿ ಅಲ್ಲಿಂದ ನಮ್ಮನ್ನು ಪೋಲೀಸರು ಸುಶೀಲಾನಗರ ಬಳಿಯ ಬೀರಲಿಂಗೇಶ್ವರ ಗುಡಿ ಮತ್ತು ಹೊಲಗಳಿಗೆ ಹೋಗುವ ದಾರಿಯ ಬಳಿ ಹೋಗಿ ಅಲ್ಲಿ 4 ಚಕ್ರದ ಪಿಕ್‌ಅಪ್ ವಾಹನ ನಿಂತಿದ್ದು ಅದರ ಹಿಂಬದಿಯಲ್ಲಿ 4 ಜನರು ನಿಂತು ಕೊಂಡಿದ್ದು ಸಣ್ಣ ಸಣ್ಣ ಚಕ್ಕೆಗಳನ್ನು ತುಂಬುತ್ತಿದ್ದರು. ನಂತರ ಪೋಲೀಸರನ್ನು ನೋಡಿ ಅವರ ಪೈಕಿ 3 ಜನ ಓಡಿ ಹೋಗಿದ್ದು ಉಳಿದ ಒಬ್ಬನನ್ನು ಹಿಡಿದುಕೊಂಡು ಕೇಳಿ ವಿಚಾರಣೆ ಮಾಡಿದಾಗ ತನ್ನ ಹೆಸರು ಕಿರಣ್ ನಾಯಕ, ಓಡಿ ಹೋದವರ ಹೆಸರು ಸ್ವಾಮಿ ನಾಯಕ್, ಬಬುಲ್ ಹಾಗೂ ಪವನ್ ನಾಯಕ್ ಎಂದು ಹೇಳಿದ್ದು ಅವುಗಳನ್ನು ಪರಿಶೀಲಿಸಿದಾಗ ಅಲ್ಲಿ ಪಿಕ್‌ಅಪ್ ವಾಹನ ಇದ್ದು ಅದರಲ್ಲಿ ಟ್ರೇಗಳಿದ್ದು ಅವುಗಳು

ಒಟ್ಟು 12 ಟ್ರೇಗಳಿದ್ದು ಅವುಗಳಲ್ಲಿ ಸಣ್ಣ ಸಣ್ಣ ಶ್ರೀಗಂಧ ಚೆಕ್ಕೆಗಳನ್ನು ತುಂಬಿದ್ದರು ಎಂದರೆ ಸರಿಯಲ್ಲ. ನಂತರ ಕಿರಣ್ ನಾಯಕ್ ಸ್ವಲ್ಪ ದೂರದಲ್ಲಿ ಕಾರು ಇದ್ದು ಅದರಲ್ಲಿ 5 ಜನ ಇರುತ್ತಾರೆ ಎಂದು ಹೇಳಿದ್ದು ಅಲ್ಲಿಗೆ ಹೋದಾಗ ಪೋಲೀಸರನ್ನು ನೋಡಿ 3 ಜನರು ತಪ್ಪಿಸಿಕೊಂಡು ಓಡಿ ಹೋಗಿದ್ದು ಉಳಿದ ಇಬ್ಬರನ್ನು ವಿಚಾರಿಸಿದಾಗ ಅವರ ಹೆಸರು ರಾಮಾಲಿ ನಾಯಕ್ ಮತ್ತು ಮಂಜಾ ನಾಯಕ ಎಂದು ಹೇಳಿದ್ದು ಓಡಿ ಹೋದವರ ಹೆಸರು ದಿನೇಶ್ ನಾಯಕ್, ಲೋಕೇಶ್ ನಾಯಕ್ ಮತ್ತು ಜುಬೇರ್ ಎಂದು ಹೇಳಿದ್ದರು ಎಂದರೆ ಸರಿಯಲ್ಲ.

ಅಲ್ಲಿ ಇದ್ದ ಕಾರಿನ ಸಂಖ್ಯೆಃ ಕೆ ಎ 35 ಪಿ 2311 ಆಗಿದ್ದು ಅದು ನೀಲಿ ಬಣ್ಣದ ಟೋಯೋಟೋ ಕಾರು ಆಗಿತ್ತು ಎಂದರೆ ಸರಿಯಲ್ಲ. ವಿಚಾರ ಮಾಡಿದಾಗ ಸದರಿ ಕಾರಿನಲ್ಲಿ ಜುಬೇರ್ ಶ್ರೀಗಂಧದ ಚೆಕ್ಕೆಗಳನ್ನು ತೆಗೆದುಕೊಂಡು ಹೋಗಲು ಬಂದಿದ್ದರು ಎಂದು ಗೊತ್ತಾಯಿತು ಎಂದರೆ ಸರಿಯಲ್ಲ. ಅವರನ್ನು ವಿಚಾರಿಸಿದಾಗ ಕುಮಾರಸ್ವಾಮಿ ಬೆಟ್ಟದಲ್ಲಿ ಹಾಗೂ ರಾಮಘಡ ಬೆಟ್ಟದಲ್ಲಿ ಇರುವ ಶ್ರೀಗಂಧದ ಮರಗಳನ್ನು ಕೂಲಿಗಳ ಮೂಲಕ ರಾತ್ರಿ ವೇಳೆ ಕಡಿಸಿ ಮನೆಗೆ ತರಿಸಿಕೊಂಡು ಆರೋಪಿ ರಾಮಾಲಿ ನಾಯಕ್ ರವರ ಮನೆಯಲ್ಲಿ ಸಂಗ್ರಹ ಮಾಡಿಕೊಂಡಿದ್ದೆವು. ನಂತರ ಆ ದಿವಸ ದಿಃ 17-10-2021 ರಂದು ಅವುಗಳನ್ನು ಖರೀದಿ ಮಾಡಲು ಆರೋಪಿ ಜುಬೇರ್ ಮತ್ತು ಇತರರು ಆ ವಾಹನದಲ್ಲಿ ಬಂದಿದ್ದು ಚೆಕ್ಕೆಗಳನ್ನು ತುಂಬುತ್ತಿದ್ದರು ಎಂದರೆ ಸರಿಯಲ್ಲ. ನಂತರ ಪೋಲೀಸರು ಅಲ್ಲಿ ಇದ್ದ ಹಸಿ ಮತ್ತು ಒಣಗಿದ ಶ್ರೀಗಂಧದ ಚೆಕ್ಕೆ ಮತ್ತು ಕಟ್ಟಿಗೆಗಳನ್ನು ತೂಕ ಮಾಡಿದ್ದು ಅವುಗಳ ಒಟ್ಟು ತೂಕ 260 ಕೆ ಜಿ ಇದ್ದು ಒಟ್ಟು ಬೆಲೆ 10 ಲಕ್ಷ 40 ಸಾವಿರ ಆಗಬಹುದು ಎಂದು ಅಂದಾಜು ಮಾಡಿದರು ಎಂದರೆ ಸರಿಯಲ್ಲ. ನಂತರ ಮಾದರಿಗಬಾಗಿ 2 ಚೆಕ್ಕೆಗಳನ್ನು ಪ್ರತ್ಯೇಕವಾಗಿ ತೆಗೆದು ಸೀಲು ಮಾಡಿದರು ಎಂದರೆ ಸರಿಯಲ್ಲ. ಈಗ ತೋರಿಸುತ್ತಿರುವ ಮುದ್ದೆ ಮಾಲು 1 ಮತ್ತು 2 ಎಂದರೆ ಸರಿಯಲ್ಲ. ಸೀಲನ್ನು ತೆರೆದು ನೋಡಿ ಅವುಗಳಲ್ಲಿರುವ ತುಂಡುಗಳನ್ನು ಸಾಕ್ಷಿಗೆ ತೋರಿಸಲಾಯಿತು. ಆದರೆ ಸಾಕ್ಷಿಯು ಅವುಗಳನ್ನು ಗುರುತಿಸಿಲ್ಲ. ನಂತರ ಉಳಿದ ಗಂಧದ ತುಂಡುಗಳು ಮತ್ತು ಚೆಕ್ಕೆಗಳನ್ನು 11 ಬ್ಯಾಗ್ ಗಳಲ್ಲಿ ತಲಾ 20 ಕೆ.ಜಿ. ಯಂತೆ ಮತ್ತು 2 ಪ್ಲಾಸ್ಟಿಕ್ ಬಾಗಳಲ್ಲಿ ತಲಾ 19 ಕೆ.ಜಿ. ಯಂತೆ ತುಂಬಿ ತೂಕ ಮಾಡಿ ದಾರದಿಂದ ಹೊಲಿದು ಸೀಲು ಮಾಡಲಾಯಿತು ಎಂದರೆ ಸರಿಯಲ್ಲ. ಅಲ್ಲಿ ಇದ್ದ 3

ಮೋಟಾರ್ ಸೈಕಲ್, ಒಂದು ಕಾರು, ಒಂದು ಪಿಕ್‌ಅಪ್ ವಾಹನವನ್ನು ಮತ್ತು ಟ್ರೇಗಳನ್ನು ಜಪ್ತು ಮಾಡಿಕೊಂಡರು ಎಂದರೆ ಸರಿಯಲ್ಲ. ಈಗ ತೋರಿಸುತ್ತಿರುವ 2 ಫೋಟೋಗಳಲ್ಲಿರುವ ವಾಹನಗಳು ಮತ್ತು ಶ್ರೀಗಂಧದ ತುಂಡುಗಳನ್ನೇ ಆ ದಿವಸ ಜಪ್ತು ಮಾಡಿಕೊಂಡರು ಎಂದರೆ ಸರಿಯಲ್ಲ. ಆ 2 ಫೋಟೋಗಳನ್ನು ನಿಪಿ-11 ಮತ್ತು 12 ಎಂದು ಗುರುತಿಸಲಾಯಿತು.

ದಿಃ 22-10-2022 ರಂದು ಪುನಃ ಪೋಲೀಸರು ನನ್ನನ್ನು ಮತ್ತು ಚಾಸಾ 5 ರವರನ್ನು ನೋಟೀಸ್ ಕೊಟ್ಟು ಪಂಚನಾಮೆ ವಿಚಾರವಾಗಿ ಮಾಹಿತಿ ಕೊಟ್ಟು ಮದ್ಯಾಹ್ನದ ವೇಳೆ ಠಾಣೆಗೆ ಬರಮಾಡಿಕೊಂಡು ಆರೋಪಿ ಕಿರಣ್ ನಾಯಕ್ ಮತ್ತು ರಾಮಾಲಿ ನಾಯಕ್ ಮತ್ತು ಮಂಜು ನಾಯಕ್ ರವರು ಪೋಲೀಸರನ್ನು ಮತ್ತು ನಮ್ಮನ್ನು ಕರೆದುಕೊಂಡು ಕುಮಾರಸ್ವಾಮಿ ಮತ್ತು ರಾಮಸ್ವಾಮಿ ಬೆಟ್ಟದ ಸ್ವಾಮಿಮಲೈ ಅರಣ್ಯ ಪ್ರದೇಶಕ್ಕೆ ಕರೆದುಕೊಂಡು ಹೋಗಿ ಅಲ್ಲಿ ವಾಹನಗಳನ್ನು ನಿಲ್ಲಿಸಿ 4 ಶ್ರೀಗಂಧದ ಮರಗಳನ್ನು ತೋರಿಸಿ ಸದರಿ ಶ್ರೀಗಂಧದ ಮರಗಳಿಂದ ಸುಮಾರು 750 ಗ್ರಾಂ ತೂಕದ ಚೆಕ್ಕೆಗಳನ್ನು ತೆಗೆದುಕೊಂಡಿರುವುದಾಗಿ ತಿಳಿಸಿದ್ದು ಅಲ್ಲಿ ನಮ್ಮ ಸಮಕ್ಷಮ ನಿಪಿ-4 ರಂತೆ ಪಂಚನಾಮೆ ಮಾಡಿ, ನಿಪಿ-7 ರ ಫೋಟೋ ತೆಗೆದರು ಎಂದರೆ ಸರಿಯಲ್ಲ.

ಅದೇ ರೀತಿ 2 ಕಿ. ಮೀ. ನಂತರ ಕರೆದುಕೊಂಡು ಹೋಗಿ ಅಲ್ಲಿ ಮರಗಳ ಮಧ್ಯ ಇದ್ದ ಒಂದು ಶ್ರೀಗಂಧದ ಮರವನ್ನು ತೋರಿಸಿ ಆ ಮರದಿಂದ ಸುಮಾರು 150 ಗ್ರಾಂ ತೂಕದ ಚೆಕ್ಕೆಯನ್ನು ತೆಗೆದುಕೊಂಡಿರುವುದಾಗಿ ತೋರಿಸಿದ್ದು ಅದರ ಬಗ್ಗೆ ವಿವರವಾದ ಪಂಚನಾಮೆಯನ್ನು ಸಂಜೆ 4-30 ರವರೆಗೆ ಬೆರಳಚ್ಚು ಮಾಡಿ ನಿಪಿ-8 ರ ಫೋಟೋ ತೆಗೆಯಲಾಯಿತು ಎಂದರೆ ಸರಿಯಲ್ಲ.

ಆ ನಂತರ ಸದರಿ ಆರೋಪಿಗಳು ಶ್ರೀಗಂಧದ ಕಟ್ಟಿಗೆಗಳು ಮತ್ತು ಚೆಕ್ಕೆಗಳನ್ನು ಸಂಗ್ರಹ ಮಾಡಿದ್ದ ಮತ್ತು ಅವುಗಳನ್ನು ತಂದಿದ್ದ ಜಾಗ ತೋರಿಸುತ್ತೇವೆ ಎಂದು ಹೇಳಿದ್ದು ಅದರಂತೆ ದಿಃ 23-10-2021 ರಂದು ರಾಮಘಡಕ್ಕೆ ಹೋಗುವ ರಸ್ತೆಯಿಂದ ಒಳಗೆ ಕರೆದುಕೊಂಡು ಹೋಗಿ ಅಲ್ಲಿ 3 ಶ್ರೀಗಂಧದ ಮರಗಳನ್ನು ತೋರಿಸಿ ಅವುಗಳಿಂದ ಸುಮಾರು 500 ಗ್ರಾಂ ತೂಕದ ಚೆಕ್ಕೆಯನ್ನು ತೆಗೆದುಕೊಂಡಿರುವುದಾಗಿ ತಿಳಿಸಿದರು. ಆ ನಂತರ ಅದೇ ರೀತಿ ಬೇರೆ ಬೇರೆ ಪ್ರದೇಶಗಳಿಗೆ ಕರೆದುಕೊಂಡು ಹೋಗಿ ಶ್ರೀಗಂಧದ

ಚೆಕ್ಕೆಗಳನ್ನು ಸಂಗ್ರಹಿಸಿದ್ದ ಬಗ್ಗೆ ತೋರಿಸಿದ್ದರು. ನಂತರ ರಾಮಾಲಿ ತನ್ನ ಮನೆಗೆ ಕರೆದುಕೊಂಡು ಹೋಗಿ ಅವರ ಮನೆಯಲ್ಲಿ ಚೆಕ್ಕೆಗಳನ್ನು ಇಟ್ಟಿದ್ದ ಜಾಗ ತೋರಿಸಿದ್ದು ಅಲ್ಲಿ ಒಂದು ಕಬ್ಬಿಣದ ಮಂಚ ಇದ್ದು ಅದರ ಕೆಳಗೆ ಯಾರಿಗೂ ಕಾಣದಂತೆ ಸಂಗ್ರಹಿಸಿ ಇಡುತ್ತಿದ್ದೆ ಎಂದು ಹೇಳಿದ್ದು ನಂತರ ಆ ಜಾಗದಲ್ಲಿ ನಿಪಿ-9 ಮತ್ತು 10 ರಂತೆ ಪೋಟೋಗಳನ್ನು ತೆಗೆದು ನಿಪಿ-5 ರಂತೆ ವಿವರವಾದ ಪಂಚನಾಮೆಯನ್ನು ಬೆರಳಚ್ಚು ಮಾಡಿ ನಿಪಿ-6 ರಂತೆ ಕಚ್ಚಾ ನಕಾಶೆಯನ್ನು ತಯಾರು ಮಾಡಿದರು ಎಂದರೆ ಸರಿಯಲ್ಲ. ನಂತರ ಠಾಣೆಗೆ ವಾಪಾಸ್ಸು ಬಂದು ಪ್ರಿಂಟ್ ಹಾಕಿಸಿ ನಮ್ಮ ಸಹಿಗಳನ್ನು ತೆಗೆದುಕೊಳ್ಳಲಾಯಿತು ಎಂದರೆ ಸರಿಯಲ್ಲ. ಆಯಾ ಸ್ಥಳಗಳಲ್ಲಿ ನಮ್ಮ ಸಮಕ್ಷಮ ಜಪ್ತು ಮಾಡಿಕೊಂಡಿದ್ದ ವಸ್ತುಗಳನ್ನು ಸೂಕ್ತವಾಗಿ ಗುರುತು ಮಾಡಲಾಯಿತು ಎಂದರೆ ಸರಿಯಲ್ಲ. ಈ ಎಲ್ಲಾ ವಿಚಾರಗಳು ಸತ್ಯವಾಗಿದ್ದರೂ ಸಹ ಈಗ ಆರೋಪಿಗಳ ಜೊತೆ ಶಾಮಿಲಾಗಿ ಕೇಸಿನಲ್ಲಿ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳಲು ಬಂದಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲುಃ ಆರೋಪಿ ಪರ ಶ್ರೀ ಆರ್ ಕೆ ವಕೀಲರಿಂದಃ</u>**

ಪಾಟೀ ಸವಾಲು ಇಲ್ಲ ಎಂದು ಹೇಳಿದ್ದಾರೆ.

**(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು).**

ಓ. ಹೇ. ಕೆ. ಸರಿ ಇದೆ.

**1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**

**ವಿಶೇಷ ನ್ಯಾಯಾಲಯ, ಬಳ್ಳಾರಿ.**